# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದಪ್ರಶ್ನೆ ಸಂಖ್ಯೆ :1335

ಸದಸ್ಯರ ಹೆಸರು :ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ)

ಉತ್ತರಿಸುವ ದಿನಾಂಕ :17.12.2025

ಉತ್ತರಿಸುವ ಸಚಿವರು :ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ್ಯಂತ ಸರ್ಕಾರದ ಸ್ವಾಧೀನದಲ್ಲಿರುವ ಹಾಗೂ ಗೋಮಾಳ ಭೂಮಿಯೆಂದು ಸರ್ಕಾರ ಘೋಷಿಸಿರುವ ಜಮೀನುಗಳ ವಿವರ ನೀಡುವುದು; ಸದರಿ ಜಮೀನುಗಳನ್ನು ಒತ್ತುವರಿ ಮಾಡಿರುವುದು. ಗುಂಡಿಗಳನ್ನು ಮಾಡಿ. ಮಣ್ಣನ್ನು ತೆಗೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ. ಸರ್ಕಾರದ ಕ್ರಮವೇನು: | ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ.<br><br>ಸರ್ಕಾರಿ ಜಮೀನುಗಳನ್ನು ಸಂರಕ್ಷಿಸಲು ಈ ಕೆಳಕಂಡಂತೆ ಕ್ರಮಕೈಗೊಳ್ಳಲಾಗುತ್ತಿದೆ.<br>ರಾಜ್ಯದಲ್ಲಿ ಕಂದಾಯ ಇಲಾಖೆಯಡಿ ಬರುವ ಸರ್ಕಾರಿ ಸರ್ಕಾರಿ ಜಮೀನಿನ ಸಂರಕ್ಷಣೆಗಾಗಿ ಸರ್ಕಾರವು ಈ ಕೆಳಕಂಡಂತೆ ಕ್ರಮ ಕೈಗೊಂಡಿರುತ್ತದೆ.<br><br>1. ಕಂದಾಯ ಇಲಾಖೆಯಡಿ ಬರುವ ಸರ್ಕಾರಿ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲು ರಾಜ್ಯದ ಎಲ್ಲಾ ಜಿಲೆಗಳಲ್ಲಿ, ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಕಾರ್ಯ ಪಡೆಗಳನ್ನು ರಚಿಸಲಾಗಿದೆ. ಅದರಂತೆ ಎಲ್ಲಾ ಜಿಲ್ಲಾಧಿಕಾರಿಗಳು ಕಾಲಬದ್ಧ ಕ್ರಿಯಾ ಯೋಜನೆ ಸಿದ್ಧಪಡಿಸಿಕೊಂಡು, ಒತ್ತುವರಿ ಆಗಿರುವ ಸರ್ಕಾರಿ ಜಮೀನುಗಳನ್ನು ತೆರವುಗೊಳಿಸಲು ಕ್ರಮವಹಿಸುತ್ತಿದ್ದಾರೆ.<br>2. ಬೀಟ್ ತಂತ್ರಾಂಶ (Beat App): ಸರ್ಕಾರಿ ಜಮೀನುಗಳನ್ನು ಗುರುತಿಸಿ Geofencing ಮಾಡಿ ಒತ್ತುವರಿಗಳಿಂದ ರಕ್ಷಣೆ ಮಾಡುವ ಸಲುವಾಗಿ ಬೀಟ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ಇದರಿಂದಾಗಿ ಎಲ್ಲಾ ರೀತಿಯ ಸರ್ಕಾರಿ ಜಮೀನುಗಳನ್ನು ಗುರುತಿಸಿ Geofenicing ಹದ್ದುಬಸ್ತು ಮೂಲಕ |

| | | |
|---|---|---|
| | | ಒತ್ತುವರಿಗಳನ್ನು ಗುರುತಿಸಲಾಗುತ್ತದೆ. ನಂತರ ಸದರಿ ಒತ್ತುವರಿಗಳನ್ನು ತೆರವುಗೊಳಿಸಲು ಮತ್ತು ತಂತ್ರಾಂಶದಲ್ಲಿ ಇಂದೀಕರಿಸಲು ಅವಕಾಶ ನೀಡಲಾಗುತ್ತದೆ. ಸದರಿ ಸರ್ಕಾರಿ ಜಮೀನುಗಳ ಅನಧಿಕೃತ ಒತ್ತುವರಿಯನ್ನು ತಡೆಗಟ್ಟಲು ಸಂಬಂಧಿಸಿದ ಅಧಿಕಾರಿಗಳು ಪ್ರತಿ 3 ತಿಂಗಳಿಗೊಮ್ಮೆ ಸ್ಥಳ ಪರಿಶೀಲನೆ ಮಾಡಿ, ವಿಡಿಯೋ ಮಹಜರ್ ಮತ್ತು ಛಾವಚಿತ್ರಗಳನ್ನು ಅಪ್ಲೋಡ್ (Upload) ಮಾಡಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ರೀತಿಯಾಗಿ ಸರ್ಕಾರಿ ಜಮೀನುಗಳನ್ನು ರಕ್ಷಿಸಲು ನಿರಂತರ ಪರಿವೀಕ್ಷಣೆ ಹಾಗೂ ಮೇಲ್ವಿಚಾರಣೆ ಮಾಡಲು ತಂತ್ರಾಂಶವು ಸಹಾಯಕಾರಿಯಾಗಿರುತ್ತದೆ.<br>3. ಒತ್ತುವರಿ ಪ್ರಕರಣಗಳನ್ನು ಸಮರ್ಥವಾಗಿ ತಡೆಯುವ ಸಲುವಾಗಿ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯವನ್ನು ರಚಿಸಲಾಗಿದೆ. ಒತ್ತುವರಿದಾರರ ವಿರುದ್ಧ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲದಲ್ಲಿ, ಪ್ರಕರಣವನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಕಲಂ 192-ಎ ರನ್ವಯ ದಾಖಲಿಸಲಾಗುತ್ತಿದೆ ಹಾಗೂ ಅಕ್ರಮವಾಗಿ ಪರಭಾರೆ ಮಾಡುತ್ತಿರುವವರ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ FIR ದಾಖಲಿಸಲಾಗುತ್ತಿದೆ. |
| ಆ) | ಸದರಿ ಸರ್ಕಾರಿ ಗೋಮಾಳ ಭೂಮಿಯು ಕೆಲವೊಂದು ಪ್ರದೇಶದಲ್ಲಿ ಪಾಳು ಬಿದ್ದಿದ್ದು, ಅದನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮವೇನು; ಈ ಸರ್ಕಾರಿ ಗೋಮಾಳ ಭೂಮಿಗಳ ಮೇಲ್ವಿಚಾರಣೆ ಮಾಡುವುದು ಹಾಗೂ ಸಂರಕ್ಷಣೆ ಮಾಡುವ | ಸರ್ಕಾರಿ ಜಮೀನುಗಳ ಕಬಳಿಕೆಯನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು :-<br>1. ಬೆಂಗಳೂರು ಜಿಲ್ಲೆಯಲ್ಲಿ ಸರ್ಕಾರಿ ಜಮೀನುಗಳಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ಇಂಡೆಕ್ಸಿಂಗ್ ಅಂಡ್ ಕ್ಯಾಟಲಾಗಿಂಗ್ ಮತ್ತು ಸ್ಕ್ಯಾನಿಂಗ್ |

| | | |
|---|---|---|
| | ಜವಾಬ್ದಾರಿ ಯಾರದ್ದಾಗಿರುತ್ತದೆ: | ಮಾಡಲಾಗಿದೆ.<br>2. ಭೂಮಿ ತಂತ್ರಾಂಶದಲ್ಲಿ ಎಲ್ಲಾ ಸರ್ಕಾರಿ ಜಮೀನುಗಳನ್ನು ಫ್ಲಾಗ್ ಮಾಡಲಾಗುತ್ತಿದೆ. ಇದರಿಂದ ಸರ್ಕಾರಿ ಜಮೀನುಗಳ ಅನಧಿಕೃತ ವಹಿವಾಟು ಮಾಡಲು ಹಾಗೂ ಅನಧಿಕೃತ ಋಣಭಾರಗಳನ್ನು ಸೃಷ್ಟಿಸಲು ಅವಕಾಶವಿರುವುದಿಲ್ಲ<br>3. ಒತ್ತುವರಿಯಿಂದ ತೆರವುಗೊಳಿಸಲಾದ ಸರ್ಕಾರಿ ಜಮೀನುಗಳಿಗೆ ಕಂದಕ, ತಂತಿಬೇಲಿ ಹಾಕಿ ಮತ್ತು ನಾಮಫಲಕ ಅಳವಡಿಸಿ ಸಂರಕ್ಷಿಸಲು ಕ್ರಮ ವಹಿಸಲಾಗುತ್ತಿದೆ.<br>4. ಖೋಟಾ ದಾಖಲೆಗಳು ಸೃಷ್ಟಿಯಾಗಿರುವಂತಹ ಪ್ರಕರಣಗಳಲ್ಲಿ ದಾಖಲೆಗಳ ನೈಜತೆ ಪರಿಶೀಲನೆಗಾಗಿ Forensic Lab ಗಳಿಗೆ (ವರ್ಷಗಳ ಅಂತರ ಗೊತ್ತಾಗುತ್ತದೆ) ಕಳುಹಿಸಲು ಕ್ರಮ ವಹಿಸಲಾಗುತ್ತಿದೆ |
| ಇ) | 2023-24, 2024-25 ಮತ್ತು 2025-26 ನೇ ಸಾಲಿನಲ್ಲಿ ಸರ್ಕಾರಿ ಜಮೀನನ್ನು ರಾಜಕೀಯ ಪಕ್ಷಗಳಿಗೆ/ಕಛೇರಿಗಳಿಗೆ ನೀಡಲಾಗಿದೆಯೇ: ನೀಡಿದ್ದರೆ, ಯಾವ ಸ್ಥಳದಲ್ಲಿ, ಎಷ್ಟು ಜಮೀನನ್ನು, ಯಾವ ರಾಜಕೀಯ ಪಕ್ಷಕ್ಕೆ ನೀಡಲಾಗಿದೆ; ನೀಡಿರುವ ಜಮೀನಿನ ಮೌಲ್ಯವೆಷ್ಟು: ಸದರಿ ಜಮೀನುಗಳನ್ನು ನೀಡಲು ಸರ್ಕಾರ ಅನುಸರಿಸಿರುವ ಕ್ರಮಗಳೇನು; ಯಾವ ಇಲಾಖೆಯ ಪೂರ್ವಾನುಮತಿ ಪಡೆಯಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು); | ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |

ಸಂಖ್ಯೆ: ಆರ್‌ಡಿ 212 ಎಲ್‌ಜಿಕ್ಯೂ 2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

| ಅನುಬಂದ-1 (LCQ-1104(1335) | | | |
|---|---|---|---|
| ಕ್ರ.ಸಂ | ಜಿಲ್ಲೆ | ಎಕರೆ | ಗುಂಟೆ |
| 1 | ಬೆಂಗಳೂರು ನಗರ | 118425 | 4 |
| 2 | ಬೆಂಗಳೂರು ಗ್ರಾಮಾಂತರ | 77324 | 7 |
| 3 | ಚಿಕ್ಕಬಳ್ಳಾಪುರ | 131041 | 7 |
| 4 | ತುಮಕೂರು | 387958 | 35 |
| 5 | ಕೋಲಾರ | 65692 | 21 |
| 6 | ಬೆಂಗಳೂರು ದಕ್ಷಿಣ | 123463 | 9 |
| 7 | ಚಿತ್ರದುರ್ಗ | 135082 | 12 |
| 8 | ದಾವಣಗೆರೆ | 111283 | 1 |
| 9 | ಶಿವಮೊಗ್ಗ | 144678 | 1 |
| 10 | ಚಾಮರಾಜನಗರ | 27465 | 32 |
| 11 | ಚಿಕ್ಕಮಗಳೂರು | 245293 | 21 |
| 12 | ದಕ್ಷಿಣ ಕನ್ನಡ | 6666 | 33 |
| 13 | ಹಾಸನ | 142009 | 2 |
| 14 | ಕೊಡಗು | 1651 | 1 |
| 15 | ಮಂಡ್ಯ | 129049 | 0 |
| 16 | ಮೈಸೂರು | 169124 | 18 |
| 17 | ಉಡುಪಿ | 3616 | 21 |
| 18 | ಕಲಬುರಗಿ | 50693 | 15 |
| 19 | ಬಳ್ಳಾರಿ | 18778 | 36 |
| 20 | ಬೀದರ್ | 21459 | 10 |
| 21 | ವಿಜಯನಗರ | 196 | 36 |
| 22 | ಕೊಪ್ಪಳ | 21763 | 39 |
| 23 | ರಾಯಚೂರು | 34435 | 27 |
| 24 | ಯಾದಗಿರಿ | 29637 | 4 |
| 25 | ಬೆಳಗಾವಿ | 82533 | 7 |
| 26 | ಬಿಜಾಪುರ /ವಿಜಯಪುರ | 17135 | 11 |
| 27 | ಬಾಗಲಕೋಟೆ | 9410 | 30 |
| 28 | ಧಾರವಾಡ | 5697 | 26 |
| 29 | ಗದಗ | 2275 | 11 |
| 30 | ಹಾವೇರಿ | 10112 | 24 |
| 31 | ಉತ್ತರ ಕನ್ನಡ ಜಿಲ್ಲೆ | 2980 | 26 |
| ಒಟ್ಟು | | 2326935 | 7 |

ಅನುಬಂದ-2 (LCQ-1104(1335) ಕ್ಕೆ ಸಂಬಂದಿಸಿದಂತೆ

| ಕ್ರ.ಸಂ | ಜಿಲ್ಲೆ | ಮಾಹಿತಿ |
|---|---|---|
| 1 | ಬೆಂಗಳೂರು ನಗರ | ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ |
| 2 | ಬೆಂಗಳೂರು ಗ್ರಾಮಾಂತರ | 2025-26ನೇ ಸಾಲಿನಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕು ಕಸಬಾ ಹೋಬಳಿ ವೀರಭದ್ರಪಾಳ್ಯ ಗ್ರಾಮದ ಸ.ನಂ.66ರಲ್ಲಿ 0-15 ಗುಂಟೆ ಜಮೀನನ್ನು ಕಾಂಗ್ರೇಸ್ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರದ ಪೂರ್ವಾನುಮತಿ ಪಡೆದು ಮಂಜೂರು ಮಾಡಲಾಗಿರುತ್ತದೆ.<br><br>ಮಾರುಕಟ್ಟೆ ಮಾರ್ಗಸೂಚಿ ಬೆಲೆ 5,31,300/- |
| 3 | ಚಿಕ್ಕಬಳ್ಳಾಪುರ | ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ |
| 4 | ತುಮಕೂರು | ಸರ್ಕಾರದ ನಡವಳಿ ಆದೇಶ ಸಂಖ್ಯೆ.ಕಂಇ/60/ಎಲ್.ಜಿ.ಟಿ/2023 ದಿನಾಂಕ 29.10.2025ರಂತೆ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಕುಣಿಗಲ್ ಕಸಬಾ ಗ್ರಾಮದ ಸ.ನಂ. 110 ರಲ್ಲಿ 0.09.08. ಗುಂಟೆ ಜಮೀನನ್ನು ತಾಲ್ಲೂಕು ಕಾಂಗ್ರೇಸ್ ಸಮಿತಿ ಇವರಿಗೆ ಕಾಂಗ್ರೇಸ್ ಕಚೇರಿ ಕಟ್ಟಡ ನಿರ್ಮಾಣದ ಉದ್ದೇಶಕ್ಕಾಗಿ ಮಂಜೂರು ಮಾಡಲು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 27 ರಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 22ಎ(1)(i) ಅನ್ನು ಸಡಿಲಿಸಿ, ಪ್ರಸ್ತಾಪಿತ ಜಮೀನಿನ ಪ್ರಚಲಿತ ಮಾರ್ಗಸೂಚಿ ಮೌಲ್ಯದ ಶೇಕಡ 5 ರಷ್ಟು ಮತ್ತು ಇನ್ನಿತರ ಶಾನಸಬದ್ಧ ಶುಲ್ಕಗಳನ್ನು ವಿಧಿಸಿರುವಂತೆ ಮಂಜೂರಾತಿ ಮೊತ್ತ ಒಟ್ಟು ರೂ/-1,38,170/- (ಒಂದು ಲಕ್ಷದ ಮೂವತ್ತೇಂಟು ಸಾವಿರದ ಒಂದು ನೂರ ಎಪ್ಪತ್ತು ) ರೂಪಾಯಿಗಳನ್ನು ಪಾವತಿಸಿಕೊಂಡು ಮಂಜೂರು ಮಾಡಲಾಗಿರುತ್ತದೆ. |
| 5 | ಕೋಲಾರ | ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ |
| 6 | ಬೆಂಗಳೂರು ದಕ್ಷಿಣ | ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ |
| 7 | ಚಿತ್ರದುರ್ಗ | ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ |
| 8 | ದಾವಣಗೆರೆ | ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ |
| 9 | ಶಿವಮೊಗ್ಗ | ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ |
| 10 | ಚಾಮರಾಜನಗರ | ಸರ್ಕಾರದ ಆದೇಶ ಸಂಖ್ಯೆ :ಆರ್.ಡಿ.15 ಎಲ್‌ಜಿ ಎಂ 2025 ದಿನಾಂಕ:19-06-2025 ರ ರೀತ್ಯಾ ಚಾಮರಾಜನಗರ ತಾಲ್ಲೂಕಿನ ಕಸಬಾ ಹೋಬಳಿಯ ಚಾಮರಾಜನಗರ ಗ್ರಾಮದ ಸ.ನಂ: 475ರಲ್ಲಿ 25 ಗುಂಟೆ ಸರ್ಕಾರಿ ಜಮೀನನ್ನು ಕಾಂಗ್ರೆಸ್ ಭವನ ಕಟ್ಟಡ ನಿರ್ಮಾಣದ ಉದ್ದೇಶಕ್ಕಾಗಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 22-ಎ(2) ರನ್ವಯ ಮಾರುಕಟ್ಟೆ ಮೌಲ್ಯದ ಶೇಕಡ 100ರಷ್ಟು ಅಂದರೆ ಚಾಮರಾಜನಗರ ಗ್ರಾಮದ ಮಾರುಕಟ್ಟೆ ಮೌಲ್ಯವು ಎಕರೆ ಜಮೀನಿಗೆ 25,00,000/-( ಇಪ್ಪತ್ತು ಐದು ಲಕ್ಷ ರೂ.ಗಳಿದ್ದು ಅದರಂತೆ 25 ಗುಂಟೆ ಜಮೀನಿಗೆ ಲೆಕ್ಕ ಹಾಕಲಾಗಿ 15,62,500/- (ಹದಿನೈದು ಲಕ್ಷದ ಅರವತ್ತೆರಡು ಸಾವಿರದ ಐದುನೂರು)ರೂ. ಪೋಡಿ ಶುಲ್ಕ, 55/-(ಐವತ್ತೈದು)ರೂ. ಮತ್ತು ಆರ್‌ಆರ್ ಶುಲ್ಕ 10/-(3). 15,62,565/- (ಹದಿನೈದು ಲಕ್ಷದ ಅರವತ್ತೆರಡು ಸಾವಿರದ ಐದುನೂರ ಅರವತ್ತೈದು) ರೂಗಳನ್ನು ಪಾವತಿಸುವ ಷರತ್ತುಗಳೊಂದಿಗೆ ಕಾಂಗ್ರೆಸ್ ಭವನ ಟ್ರಸ್ಟ್(ರಿ) ಬೆಂಗಳೂರು ರವರಿಗೆ ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ. |

<table>
<tr><td>11</td><td>ಚಿಕ್ಕಮಗಳೂರು</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>12</td><td>ದಕ್ಷಿಣ ಕನ್ನಡ</td><td>ದಕ್ಷಿಣ ಕನ್ನಡ ಜಿಲ್ಲೆ, ಪುತ್ತೂರು ತಾಲೂಕು, ಪುತ್ತೂರು ಕಸಬಾ ಗ್ರಾಮದ ಸ. ನಂ 124/7ಎ2 ರಲ್ಲಿ 0.08 ಎಕ್ರೆ (ಎಂಟು ಸೆಂಟ್ಸ್) ಸರಕಾರಿ ಜಮೀನನ್ನು ಕಾಂಗ್ರೆಸ್ ಭವನ ಟ್ರಸ್ಟ್ ನಿರ್ಮಾಣದ ಉದ್ದೇಶಕ್ಕೆ ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ರವರ ಹೆಸರಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಆರ್ ಡಿ 37 ಎಲ್ ಜಿ ಎ 2025 (E-1725945), ಬೆಂಗಳೂರು ದಿನಾಂಕ:15.09.2025 - ರಂತೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ " ನಿಯಮ 27 ರಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 22ಎ (2) ನ್ನು ಸಡಿಲಿಸಿ, ಮಾರ್ಗದರ್ಶಿ ಮೌಲ್ಯದ ಶೇಕಡ 5 ರಷ್ಟು ಸ್ಥಳ ಮೌಲ್ಯ ಹಾಗೂ ಇತರೆ ಶುಲ್ಕ ವಿಧಿಸಿ (ರೂ. 19,471/-) ಮಂಜೂರು ಮಾಡಲಾಗಿರುತ್ತದೆ.</td></tr>
<tr><td>13</td><td>ಹಾಸನ</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>14</td><td>ಕೊಡಗು</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>15</td><td>ಮಂಡ್ಯ</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>16</td><td>ಮೈಸೂರು</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>17</td><td>ಉಡುಪಿ</td><td>ಉಡುಪಿ ಜಿಲ್ಲೆಯಲ್ಲಿ ಸನ್ 2025-26 ನೇ ಸಾಲಿನಲ್ಲಿ ಸರ್ಕಾರಿ ಜಮೀನನ್ನು ರಾಜಕೀಯ ಪಕ್ಷಗಳಿಗೆ ಈ ಕೆಳಗೆ ವಿವರಿಸಿರುವಂತೆ ಮಂಜೂರು ಮಾಡಲಾಗಿದೆ.
<table>
<tr><td rowspan="2">ಕ್ರ ಸಂ</td><td colspan="4">ರಾಜಕೀಯ ಪಕ್ಷದ ಹೆಸರು :ಕಾಂಗ್ರೆಸ್ ಭವನ</td><td rowspan="2">ಜಮೀನಿನ ಮೌಲ್ಯ</td></tr>
<tr><td>ತಾಲ್ಲೂಕು</td><td>ಗ್ರಾಮ</td><td>ಸ.ನಂ</td><td>ವಿಸ್ತೀರ್ಣ</td></tr>
<tr><td>1</td><td>ಉಡುಪಿ</td><td>ಅಂಜಾರು</td><td>32/*</td><td>0.20</td><td>81,666</td></tr>
<tr><td>2</td><td>ಕಾರ್ಕಾಳ</td><td>ಕುಕ್ಕುಂದೂರು</td><td>534/1A1</td><td>0.14</td><td>1,66,929</td></tr>
<tr><td>3</td><td>ಕುಂದಾಪುರ</td><td>ಕುಂದಾಪುರ</td><td>147/1ಸಿ1ಬಿ</td><td>0.11</td><td>1,79,539</td></tr>
</table>
</td></tr>
<tr><td>18</td><td>ಕಲಬುರಗಿ</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>19</td><td>ಬಳ್ಳಾರಿ</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>20</td><td>ಬೀದರ್</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>21</td><td>ವಿಜಯನಗರ</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>22</td><td>ಕೊಪ್ಪಳ</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>23</td><td>ರಾಯಚೂರು</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>24</td><td>ಯಾದಗಿರಿ</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>25</td><td>ಬೆಳಗಾವಿ</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>26</td><td>ಬಿಜಾಪುರ /ವಿಜಯಪುರ</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>27</td><td>ಬಾಗಲಕೋಟೆ</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>28</td><td>ಧಾರವಾಡ</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>29</td><td>ಗದಗ</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>30</td><td>ಹಾವೇರಿ</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
<tr><td>31</td><td>ಉತ್ತರ ಕನ್ನಡ ಜಿಲ್ಲೆ</td><td>ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ</td></tr>
</table>